# ಹೀಗೂ ವೈರಸ್ ಅಳಿಸಬಹುದು!

■ **ಶಶಿಕುಮಾರ್ ಸಿ.**

ವೈರಸ್‌ಗೆ ಮತ್ತೊಂದು ಹೆಸರೇ ಮಾಲ್‌ವೇರ್. ಇದು ಸ್ಮಾರ್ಟ್‌ಫೋನ್‌ಗಳಲ್ಲಿ ಕಂಡುಬರುವ ಬಹುದೊಡ್ಡ ತಲೆನೋವಿನ ಸಮಸ್ಯೆ. ಅನಧಿಕೃತ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡುವುದರಿಂದ, ಬೇರೆಬೇರೆ ವೆಬ್‌ಸೈಟ್‌ಗಳಿಗೆ ಭೇಟಿನೀಡುವುದರಿಂದ ಮಾಲ್‌ವೇರ್ ನಮಗೆ ಗೊತ್ತಿಲ್ಲದಂತೆ ಫೋನ್‌ನಲ್ಲಿ ನುಸುಳಿ ಮಾಹಿತಿ ಸೋರಿಕೆ, ಫೋನ್‌ಗಳ ಕಾರ್ಯಕ್ಷಮತೆ ಕ್ಷೀಣಿಸುವುದು, ಇದ್ದಕ್ಕಿದ್ದಂತೆ ಸಾಕಷ್ಟು ಜಾಹೀರಾತುಗಳು ಸ್ವಯಂಚಾಲಿತವಾಗಿ ತೆರೆದುಕೊಳ್ಳುವಂತಹ ಸಮಸ್ಯೆಗಳನ್ನು ಉಂಟು ಮಾಡುತ್ತದೆ.

ಹೀಗಾಗಿಯೇ, ವೈರಸ್ ಹರಡಲು ನೆರವಾಗುವಂತಹ ಆ್ಯಪ್‌ಗಳ ಡೌನ್‌ಲೋಡ್‌ಗೆ ಗೂಗಲ್ ಕಡಿವಾಣ ಹಾಕಿದೆ. ಆದರೂ ಈ ಸಮಸ್ಯೆ ಅಂತ್ಯವಾಗಿಲ್ಲ. ಸಾಕಷ್ಟು ಎಚ್ಚರ ವಹಿಸಿದ್ದರೂ ಸ್ಮಾರ್ಟ್‌ಫೋನ್‌ಗೆ ವೈರಸ್ ನುಸುಳಿದೆ ಎಂದಾದರೆ, ಮೊಬೈಲ್‌ನ ಯಾವುದೇ ಡಾಟಾ ಅಳಿಸದೆಯೇ ವೈರಸ್ ತೆಗೆಯಲು ಇಲ್ಲೊಂದು ಮಾರ್ಗವಿದೆ.

ಅದಕ್ಕೆ ನೀವು ಮಾಡಬೇಕಾದದ್ದು ಇಷ್ಟೇ...




ಮೊದಲು ಸ್ಮಾರ್ಟ್‌ಫೋನ್ ಸ್ವಿಚ್ ಆಫ್ ಮಾಡಿ. ಬಳಿಕ ವಾಲ್ಯೂಮ್ ಹಾಗೂ ಪವರ್ ಬಟನ್ ಬಳಸಿ ಸೇಫ್ ಮೋಡ್‌ನಲ್ಲಿ ಮೊಬೈಲ್ ಅನ್ನು ರಿಬೂಟ್ ಮಾಡಬೇಕು. ಮೊಬೈಲ್‌ನಲ್ಲಿ ಬೂಟ್ ಲೋಡರ್ ತೆರೆದುಕೊಂಡ ಬಳಿಕ ಸೇಫ್ ಮೋಡ್‌ನಲ್ಲಿ ಅದನ್ನು ರೀಸ್ಟಾರ್ಟ್ ಮಾಡಿ.

ಮೊಬೈಲ್ ಆನ್ ಆದ ಬಳಿಕ ಸೆಟ್ಟಿಂಗ್ಸ್‌ಗೆ ಹೋಗಿ ಆ್ಯಪ್‌ಗಳ ಆಪ್ಶನ್ ಕ್ಲಿಕ್ಕಿಸಿ. ಅಲ್ಲಿ ನೀವು ಡೌನ್‌ಲೋಡ್ ಮಾಡಿ ಇನ್‌ಸ್ಟಾಲ್ ಮಾಡದ ಆ್ಯಪ್ ಕಂಡುಬಂದರೆ ನಿಮ್ಮ ಮೊಬೈಲ್‌ನಲ್ಲಿ ವೈರಸ್ ಇದೆ ಎಂದರ್ಥ. ಅಂತಹ ಆ್ಯಪ್‌ಗಳ ಮೇಲೆ ಒಂದೊಂದೇ ಬಾರಿ ಪ್ರತ್ಯೇಕವಾಗಿ ಟ್ಯಾಪ್ ಮಾಡಿ ಅವುಗಳನ್ನು ಅನ್ ಇನ್‌ಸ್ಟಾಲ್ ಮಾಡಿ. ಒಂದು ವೇಳೆ ಅದು ಸಾಧ್ಯವಾಗದಿದ್ದರೆ ಅಲ್ಲೇ ಕಾಣುವ ಅಡ್ಮಿನ್ ಆಕ್ಸೆಸ್ ಅನ್ನು ರಿವೋಕ್ ಮಾಡಿ ನಂತರ ಆ್ಯಪ್‌ಗಳನ್ನು ಅನ್ ಇನ್‌ಸ್ಟಾಲ್ ಮಾಡಿ. ಅದೂ ಆಗದಿದ್ದರೆ ಸೆಟ್ಟಿಂಗ್ಸ್‌ನಲ್ಲಿ ಕಾಣುವ ಸೆಕ್ಯುರಿಟಿಗೆ ಹೋಗಿ ಡಿವೈಸ್ ಅಡ್ಮಿನಿಸ್ಟ್ರೇಟರ್ ಆಪ್ಶನ್ ಕ್ಲಿಕ್ಕಿಸಿ ಆ್ಯಪ್‌ಗಳನ್ನು ಡಿಸೆಲೆಕ್ಟ್ ಮಾಡಿ ನಂತರ ಅನ್ ಇನ್‌ಸ್ಟಾಲ್ ಮಾಡಿ.

ಅದಾದ ಬಳಿಕ ನಿಮ್ಮ ಮೊಬೈಲ್ ಅನ್ನು ನಾರ್ಮಲ್ ಮೋಡ್‌ನಲ್ಲಿ ರೀಸ್ಟಾರ್ಟ್ ಮಾಡುವುದು ಕಡ್ಡಾಯ. ಒಂದು ವೇಳೆ ಈ ಕಾರ್ಯವೈಖರಿ ಕಾರ್ಯರೂಪಕ್ಕೆ ಬರದಿದ್ದರೆ ಸೆಟ್ಟಿಂಗ್ಸ್‌ನಲ್ಲಿ ಕಾಣುವ ಸಿಸ್ಟಮ್ಸ್‌ನ ರಿಸೆಟ್ ಆಪ್ಶನ್ ಅನ್ನು ಕ್ಲಿಕ್ಕಿಸಿ ಫ್ಯಾಕ್ಟರಿ ರಿಸೆಟ್ (ಎಲ್ಲ ಡಾಟಾ ಅಳಿಸಿಹಾಕುವುದು) ಮಾಡಿ. ■

# ಆ್ಯಪಲ್‌ನ ಹೊಸ 'ಐಒಎಸ್'

ಐಒಎಸ್ (ಐಫೋನ್ ಆಪರೇಟಿಂಗ್ ಸಿಸ್ಟಮ್) 12 ತಂತ್ರಾಂಶದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಐಫೋನ್ ಹಾಗೂ ಐಪ್ಯಾಡ್‌ಗಳಿಗೆ ಆ್ಯಪಲ್ ಸಂಸ್ಥೆಯು ಹೊಸ ಐಒಎಸ್ ಸಾಫ್ಟ್‌ವೇರ್ ಅನ್ನು ಬಿಡುಗಡೆ ಮಾಡಿದೆ.

ಐಒಎಸ್ 12 ತಂತ್ರಾಂಶದಿಂದ ಚಾಲ್ತಿಯಲ್ಲಿರುವ ಸಂಸ್ಥೆಯ ಎಲ್ಲ ಸಾಧನಗಳಲ್ಲಿ ಬಗ್‌ಫಿಕ್ಸ್ ಹಾಗೂ ಸೆಕ್ಯುರಿಟಿ ವಿಚಾರವಾಗಿ ಕೆಲವೊಂದು ಸಮಸ್ಯೆಗಳು ಕಂಡುಬಂದಿದ್ದವು. ಹೀಗಾಗಿ ಸಂಸ್ಥೆಯು, ಹೊಸ ಐಒಎಸ್12.3.1 ಸಾಫ್ಟ್‌ವೇರ್ ಬಿಡುಗಡೆ ಮಾಡಿದೆ. ಬಗ್‌ಫಿಕ್ಸ್ ಹಾಗೂ ಸೆಕ್ಯುರಿಟಿ ಸಮಸ್ಯೆಯನ್ನು ಸರಿಪಡಿಸಿದ್ದು, ಈ ಐಒಎಸ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ ಸಂಸ್ಥೆಯು ತಿಳಿಸಿದೆ.

ಮ್ಯಾಕ್‌ಬುಕ್‌ಗಳಿಗೂ mac os 10.14.5 ಸಾಫ್ಟ್‌ವೇರ್ ಅಪ್‌ಡೇಟ್ ಮಾಡಲಾಗಿದೆ. ಇದರಲ್ಲಿ ಕಂಡುಬಂದಿದ್ದ ಸಮಸ್ಯೆಗಳನ್ನು ಸರಿಪಡಿಸಿದೆ.

ಐಫೋನ್ ಹಾಗೂ ಐಪ್ಯಾಡ್‌ಗಳಲ್ಲಿ ಸೆಟ್ಟಿಂಗ್ಸ್‌ಗೆ ಭೇಟಿ ನೀಡಿ ಅಲ್ಲಿ ಕಾಣುವ ಜನರಲ್ ಆಪ್ಶನ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರ ಸ್ಕ್ರೀನ್ ಮೇಲೆ ಕಾಣುವ 'ಸಾಫ್ಟ್‌ವೇರ್' ಆಯ್ಕೆ ಮಾಡಿದರೆ, ಸಾಫ್ಟ್‌ವೇರ್ ಅಪ್‌ಡೇಟ್ ಆಪ್ಶನ್ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದರೆ ಫೈಲ್ ಗಾತ್ರ ತೋರುತ್ತದೆ. ಆದನ್ನು ಡೌನ್‌ಲೋಡ್ ಮಾಡಿಕೊಂಡು ಇನ್‌ಸ್ಟಾಲ್ ಮಾಡಿದರಾಯಿತು. ಹೀಗೆ ಮಾಡುವಾಗ ಫೋನ್‌ನ ಬ್ಯಾಟರಿ ಫುಲ್ ಇರುವಂತೆ ನೋಡಿಕೊಳ್ಳಿ. ಜೊತೆಗೆ ನೆಟ್‌ವರ್ಕ್ ಹೆಚ್ಚಾಗಿ ಸಿಗುವ ಅಂತರ್ಜಾಲ ಬಳಕೆಗೆ ಯಾವುದೇ ತೊಡಕಾಗದಂತೆ ಎಚ್ಚರವಹಿಸಿ. ■




## 'ಡಬ್ಲ್ಯುಪಿಎಸ್ ಆಫೀಸ್'



ಎಂ.ಎಸ್.ವರ್ಡ್, ಎಂ.ಎಸ್.ಎಕ್ಸೆಲ್, ಪಿಪಿಟಿ, ಪಿಡಿಎಫ್, ಸ್ಪ್ರೆಡ್ ಶೀಟ್, ಮೆಮೊ ಹಾಗೂ ಗೂಗಲ್ ಡಾಕ್‌ಗಳು ಸೇರಿದಂತೆ ಕೆಲ ಫೈಲ್‌ಗಳನ್ನು ಎಲ್ಲ ಮೊಬೈಲ್‌ಗಳಲ್ಲಿ ಓಪನ್ ಮಾಡಲು ಆಗಲ್ಲ. ಆಯಾ ಫೈಲ್‌ಗಳಿಗೆ ಸಹಕರಿಸುವ ಪ್ರತ್ಯೇಕ ಆ್ಯಪ್‌ಗಳು ಅಥವಾ ಮೊಬೈಲ್‌ನಲ್ಲಿ ಇನ್‌ಬಿಲ್ಟ್ ಫೀಚರ್ ಇದ್ದರೆ ಮಾತ್ರ ಅವುಗಳನ್ನು ತೆರೆಯಬಹುದು.

ಈ ಸಮಸ್ಯೆಗೆ ಪರ್ಯಾಯವಾಗಿ ಹಲವಾರು ಆ್ಯಪ್‌ಗಳು ಇವೆ. ಆದರೆ, ಈ ಮೇಲೆ ತಿಳಿಸಿದ ಎಲ್ಲ ಫೈಲ್‌ಗಳನ್ನು ಓಪನ್ ಮಾಡಲು ಸಹಕಾರಿಯಾಗುವಂತಹ ಕೇಂದ್ರಿಕೃತ ಆ್ಯಪ್‌ವೊಂದನ್ನು ಬಿಡುಗಡೆ ಮಾಡಲಾಗಿದೆ. ಡಬ್ಲ್ಯುಪಿಎಸ್ ಆಫೀಸ್ ಎಂಬ ಆ್ಯಪ್ ಅನ್ನು ಬಿಡುಗಡೆ ಮಾಡಲಾಗಿದ್ದು, ಅದು ಎಲ್ಲ ರೀತಿಯ ಫೈಲ್‌ಗಳನ್ನು ತೆರೆಯಲು ಕ್ಷಣಾರ್ಧದಲ್ಲಿ ಸ್ಪಂದಿಸುತ್ತದೆ.

ಫ್ರೀ ಪಿಡಿಎಫ್ ಕನ್ವರ್ಟರ್, ಪಿಡಿಎಫ್ ರೀಡರ್, ಎಡಿಟರ್, ಫೈಲ್ ಷೇರಿಂಗ್‌ಗೆ ಸಹಕರಿಸುವ ಸೌಲಭ್ಯವನ್ನು ಇದು ಮಾಡುತ್ತದೆ. ಮಲ್ಟಿ ವಿಂಡೊ ಮೋಡ್, ಡೇಟಾ ಗೂಢಲಿಪೀಕರಣ ಸೇರಿದಂತೆ ಇನ್ನಿತರ ಕಾರ್ಯಗಳಿಗೆ ನೆರವಾಗುತ್ತದೆ. ■